**ದಿನಾಂಕ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಎಂ.ಕೆ. ವಾದಿಯರ ಪರ ವಕೀಲರಿಂದಃ-**

ನನ್ನ ತಂದೆಯ ಹೆಸರು ನಂಜಯ್ಯ ಮತ್ತು ತಾಯಿಯ ಹೆಸರು ಚಿಕ್ಕಮ್ಮ ಎಂದರೆ ಸರಿ. ನನ್ನ ತಾಯಿಗೆ ಒಟ್ಟು 8 ಜನ ಮಕ್ಕಳಿದ್ದು, ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಹೆಸರುಗಳು ಪುಟ್ಟಮ್ಮ, ಮಹದೇವು, ಪುಟ್ಟರಾಮಮ್ಮ, ಪುಟ್ಟನಂಜಮ್ಮ, ವಿಷಕಂಠಯ್ಯ, ರುಕ್ಮಿಣಿ, ಮಂಗಳಗೌರಮ್ಮ ಮತ್ತು ಗೌರಮ್ಮ ಆಗಿರುತ್ತವೆ. ಸದರಿ ಪುಟ್ಟರಾಮಮ್ಮ ರವರ ಮಗನ ಹೆಸರು ಚಂದ್ರು ಎಂದರೆ ಸರಿ. 1ನೇ ವಾದಿಯು ಸದರಿ ಚಂದ್ರು ರವರ ಹೆಂಡತಿ ಮತ್ತು 2 ರಿಂದ 4ನೇ ವಾದಿಯು ಅವರ ಮಕ್ಕಳು ಎಂದರೆ ಸರಿ.

ದಾವಾಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳು ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿವೆ ಎಂದರೆ ಸರಿಯಲ್ಲ, ಕೇವಲ 3 ಆಸ್ತಿಗಳು ಮಾತ್ರ ನಮ್ಮ ಹೆಸರಿನಲ್ಲಿವೆ. ಸರ್ವೆ ನಂ.219/1 ಮತ್ತು 220/1 ರ ಆಸ್ತಿಗಳು ನನಗೆ ಮತ್ತು ನನ್ನ ಅಣ್ಣಿಗೆ ಸೇರಿವೆ ಎಂದರೆ ಸರಿ. ಸರ್ವೆ ನಂ.240/1, 240/2, 247/1, 247/2, 249/1 ಮತ್ತು 249/2 ರ ಆಸ್ತಿಗಳು ಕೂಡ ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ಆ ಆಸ್ತಿಗಳು ಇಲ್ಲಿಯವರೆಗೂ ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿದ್ದು, ಆ ಬಗ್ಗೆ ಪಹಣಿ ಪತ್ರಿಕೆಗಳು ಇದ್ದರೂ ಕೂಡ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿರುವ ಹಿತ್ತಲು ಮತ್ತು ಮನೆ ನನ್ನ ಮತ್ತು ನನ್ನ ಅಣ್ಣ ಹೆಸರಿನಲ್ಲಿವೆ ಎಂದರೆ ಸರಿ.

ದಿನಾಂಕ 09.02.1984 ರಂದು ದಾವಾಸ್ತಿಗಳನ್ನು ನನ್ನ ತಾಯಿ ತನ್ನ ಮೊಮ್ಮಗ ಅಂದರೆ 1ನೇ ವಾದಿಯ ಗಂಡನಾದ ಚಂದ್ರ ರವರ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಚಂದ್ರ ರವರು ಆ ವೇಳೆಗೆ ಅಪ್ರಾಪ್ತ ವಯಸ್ಕನಾಗಿದ್ದರಿಂದ, ಆ ಕ್ರಯಪತ್ರವನ್ನು ಆತನ ಹೆಸರಿನಲ್ಲಿ ನನ್ನ ತಾಯಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ, ದಾವಾಸ್ತಿಗಳ ಖಾತೆಯು ನನ್ನ ತಾಯಿಯ ಹೆಸರಿಗೆ ಎಂ.ಆರ್. ಸಂಖ್ಯೆ 6/1984-85 ರಂತೆ ಆಗಿದೆ ಎಂದರೆ ಸರಿ.

2002 ರಲ್ಲಿ ನನ್ನ ಮತ್ತು ನನ್ನ ಅಣ್ಣನ ನಡುವೆ ಮೌಖಿಕವಾಗಿ ವಿಭಾಗವಾಗಿದೆ ಎಂದರೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ವಿಭಾಗವಾದ ನಂತರ ದಾವಾಸ್ತಿಗಳ ಖಾತೆ ಮಾಡಬೇಕೆಂದು ಕಂದಾಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲ. ಆ ರೀತಿ ಅರ್ಜಿ ಸಲ್ಲಿಸಲು ನಮಗೆ ತೊಂದರೆ ಇರಲಿಲ್ಲ.

ದಾವಾಸ್ತಿಗಳಲ್ಲಿ ನಾವು ಬೆಳೆಗಳನ್ನು ಬೆಳೆದಿರುವ ಕುರಿತು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಬೆಳೆಗಳನ್ನು ಬೆಳೆದಿದ್ದು, ಆದರೆ ಅದು ನಮಗೆ ಸಿಕ್ಕಿಲ್ಲ. ಹಾಗಾಗಿ, ಅಲ್ಲಿ ಬೆಳೆಗಳನ್ನು ಬೆಳೆದಿಲ್ಲ ಎಂದರೆ ಸರಿಯಲ್ಲ.

2002 ರಿಂದ ಇಲ್ಲಿಯವರೆಗೂ ನಾವು ದಾವಾಸ್ತಿಗಳ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಹಾಗಾಗಿ, ನಾವು ದಾವಾಸ್ತಿಗಳ ಸ್ವಾಧೀನದಲ್ಲಿ ಎಂದೂ ಕೂಡ ಇಲ್ಲ ಎಂದರೆ ಸರಿಯಲ್ಲ.

ಸದರಿ ಚಂದ್ರು ಮತ್ತು ಅವರ ತಾಯಿ ಬದುಕಿರುವವರೆಗೂ ಅವರು ದಾವಾಸ್ತಿಗಳ ಸ್ವಾಧೀನದಲ್ಲಿದ್ದು, ಅವರ ಮರಣದ ನಂತರ ವಾದಿಯರು ದಾವಾಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳ ಸ್ವಾಧೀನಕ್ಕೆ ನಾನು ತೊಂದರೆ ನೀಡುತ್ತಿದ್ದೇನೆಂದು ವಾದಿಯರು ನನ್ನ ವಿರುದ್ಧ ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಅವುಗಳ ಸ್ವಾಧೀನದಲ್ಲಿ ನಾನು ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಂದ್ರು ರವರ ಹೆಸರಿನಲ್ಲಿ ಕ್ರಯಪತ್ರವಾಗಿರುವುದರಿಂದ ಮತ್ತು ದಾವಾಸ್ತಿಗಳ ಸ್ವಾಧೀನದಲ್ಲಿ ವಾದಿಯರು ಇರುವುದರಿಂದ ದಾವಾದಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ವಾದಿಯರು ಅರ್ಹರು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ**